# ಗಾಂಧಿ ಮಾತಿನ ಮೂಕಿ ಸಿನಿಮಾ

ವಿಜಯ್ ಸೇತುಪತಿ ಪ್ರಯೋಗಮುಖಿ. ‘96’ ತಮಿಳು ಸಿನಿಮಾದಲ್ಲಿ ಅವರು ಅಂತರ್ಮುಖಿ ಪ್ರೇಮಿಯಾಗಿ ಭಾವಸಮುದ್ರ ಹುದುಗಿಸಿಕೊಂಡ ಮೋಡದಂತೆ ಇದ್ದರು. ‘ಸೂಪರ್ ಡಿಲಕ್ಸ್’ ಸಿನಿಮಾದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯ ಪಾತ್ರಕ್ಕೆ ಜೀವ ತುಂಬಿದ್ದರು. ‘ಮಾಸ್ಟರ್’, ‘ಜವಾನ್’, ‘ಪೆಟ್ಟಾ’ ಚಿತ್ರಗಳಲ್ಲಿ ಖಳನಾಗಿ ಅವರ ಅಭಿನಯ ಮನಸೂರೆಗೊಂಡಿತ್ತು. ಹೊಟ್ಟೆಗೆ ಏನು ತಿನ್ನುತ್ತೀರಿ ಎಂದು ಯಾರಾದರೂ ಕೇಳಿದರೆ, ‘ರುಚಿ ಮೊಗ್ಗು ಅರಳಿಸುವ ಇಷ್ಟದ ಎಲ್ಲವನ್ನೂ’ ಎಂದು ಡಯಟ್ ವಿಮುಖಿ ಮನಸ್ಥಿತಿ ಹಂಚಿಕೊಳ್ಳುವ ಅವರು, ಸಿನಿಮಾ ಆಯ್ಕೆಯ ವಿಷಯದಲ್ಲಿ ಪಕ್ಕಾ ಡಯಟ್. ಅರ್ಥಾತ್ ತಮ್ಮ ಪಾತ್ರವನ್ನು ಅಳೆದೂ ತೂಗಿ ಆರಿಸಿಕೊಳ್ಳುತ್ತಾರೆ.

ಜನವರಿ 30ರಂದು ಅವರ ಹೊಸ ಸಿನಿಮಾ ತೆರೆಕಾಣುತ್ತಿದೆ. ಅದರ ಶೀರ್ಷಿಕೆ ‘ಗಾಂಧಿ ಟಾಕ್ಸ್’. ಇದು ಮೂಕಿ ಚಿತ್ರ ಎನ್ನುವುದು ವಿಶೇಷ. ಮಾತಿಲ್ಲದ ಸಿನಿಮಾ ಎಂದೊಡನೆ ನಮಗೆ ಸಿಂಗೀತಂ ಶ್ರೀನಿವಾಸ್ ನಿರ್ದೇಶನದ ‘ಪುಷ್ಪಕ ವಿಮಾನ’ ನೆನಪಾಗುತ್ತದೆ. ಕಮಲ ಹಾಸನ್ ಅದರಲ್ಲಿ ತುಳುಕಿಸಿದ್ದ ಭಾವಾಭಿನಯವಂತೂ ಅದ್ವಿತೀಯ. ‘ಗಾಂಧಿ ಟಾಕ್ಸ್’ ಮೂಲಕ ಮರಾಠಿ ನಿರ್ದೇಶಕ ಕಿಶೋರ್ ಪಾಂಡುರಂಗ್ ಬೇಳೇಕರ್ ಅಂತಹ ಸವಾಲಿನ ಪ್ರಯೋಗಕ್ಕೆ ಕೈಹಾಕಿದ್ದಾರೆ.

ಗಾಂಧಿ ತತ್ತ್ವದ ಅಣಕುವಾಡು ಈ ಚಿತ್ರ ಎಂಬ ವಿಶ್ಲೇಷಣೆ ಕೇಳಿಬರುತ್ತಿದೆ. ಸಿನಿಮಾದ ಆತ್ಮ ಗಾಂಧಿ ಚಿತ್ರವಿರುವ ನೋಟುಗಳು ಎನ್ನುವುದನ್ನು ಟ್ರೈಲರ್‌ನಲ್ಲಿ ಕಂಡ ಚಿತ್ರಿಕೆಗಳು ದೃಢಪಡಿಸಿವೆ. ಮಹಾದೇವ್ ಎಂಬ ನಿರುದ್ಯೋಗಿ ಯುವಕನ ಪಾತ್ರದಲ್ಲಿ ವಿಜಯ್ ಸೇತುಪತಿ ಅಭಿನಯಿಸಿದ್ದಾರೆ. ಅರವಿಂದ್ ಸ್ವಾಮಿ, ಅದಿತಿ ರಾವ್ ಹೈದರಿ ಹಾಗೂ ಮರಾಠಿ ನಟ ಸಿದ್ಧಾರ್ಥ್ ಜಾದವ್ ಕೂಡ ಪಾತ್ರವರ್ಗದಲ್ಲಿ ಇದ್ದಾರೆ. ಝೀ ಸ್ಟುಡಿಯೋಸ್ ಹಾಗೂ ಕ್ಯುರಿಸ್ ಮೂವಿಮಿಲ್ ಸಂಸ್ಥೆಗಳು ಸೇರಿ ಚಿತ್ರ ನಿರ್ಮಿಸಿವೆ. ದೊಡ್ಡ ನಟರು ಪ್ಯಾನ್ ಇಂಡಿಯಾ ಮಂತ್ರ ಪಾಡುತ್ತಿರುವ ಹೊತ್ತಿನಲ್ಲಿ ಮಾತಿನ ಹಂಗೇ ಇಲ್ಲದ ಭಾಷಾತೀತ ಚಿತ್ರವೊಂದನ್ನು ಸಾಕಾರಗೊಳಿಸಿರುವುದು ಗಮನಾರ್ಹ.

ಬಾಲಿವುಡ್ ತನ್ನನ್ನು ವಾರೆಗಣ್ಣಿನಿಂದ ನೋಡಿದೆ ಎಂದು ಹೇಳಿ, ಟೀಕಾಕಾರರ ಬಾಯಿಗೆ ಆಹಾರವಾದ ಎ.ಆರ್. ರೆಹಮಾನ್ ಈ ಸಿನಿಮಾಗೆ ಸಂಗೀತ ನೀಡಿದ್ದಾರೆ. ಅವರು ಅರಿಜಿತ್ ಸಿಂಗ್ ಜೊತೆ ಸೇರಿ ಮಟ್ಟುಗಳನ್ನು ಅಂತಿಮಗೊಳಿಸಿದ್ದಾರೆನ್ನುವುದು ಇನ್ನೊಂದು ಮುಖ್ಯ ಸಂಗತಿ. ಚಿತ್ರಿಕೆಗಳು, ಸಂಗೀತ ಹಾಗೂ ಸಂಚಾರಿಭಾವವೇ ಚಿತ್ರದ ಜೀವಾಳ ಎಂದು ನಿರ್ದೇಶಕರು ಹೇಳಿದ್ದಾರೆ.

ಖಳನ ಪಾತ್ರಗಳಿಂದ ಹೊರಬಂದು ಹೊಸತೇನನ್ನಾದರೂ ಮಾಡಬೇಕು ಎಂದು ಅಂದುಕೊಳ್ಳುವಾಗಲೇ ಈ ಸಿನಿಮಾ ಅವಕಾಶ ಬಂತು ಎನ್ನುತ್ತಾ ವಿಜಯ್ ಸೇತುಪತಿ ಕೃತಾರ್ಥರಾಗುತ್ತಾರೆ. ಗಾಂಧಿ ಮಾತು ಹೇಗಿರುತ್ತದೆ ಎಂದು ಸಿನಿಮಾ ಮಂದಿರಗಳಲ್ಲೇ ನೋಡಿ ಎಂಬ ಪ್ರೀತಿಪೂರ್ವಕ ಆಮಂತ್ರಣ ಅವರದ್ದು. ■


ವಿಜಯ್ ಸೇತುಪತಿ


ಎ.ಆರ್. ರೆಹಮಾನ್

# ಬರುತ್ತಿದೆ ವಿಶಾಲ್- ಶಾಹಿದ್ ಹೊಸ ಚಿತ್ರ

‘ಉಸ್ತಾರ ಸೇ ಪಂಗ ನಹೀ ಲೇನೆ ಕಾ... ಶರೀರ್ ಸೇ ಆತ್ಮಾ ಕಾಟ್ಕೆ ಲೇ ಜಾಯೇಗಾ’ (ಉಸ್ತಾರನನ್ನು ಕೆಣಕಬೇಡ... ಶರೀರದಿಂದ ಆತ್ಮವನ್ನೇ ಕಿತ್ತುಕೊಂಡು ಹೋಗುತ್ತಾನೆ) ಎಂಬ ಹಿಂಸಾವಿನೋದ ಸಂಭಾಷಣೆಯನ್ನು ನಿರ್ದೇಶಕ ವಿಶಾಲ್ ಭಾರದ್ವಾಜ್ ಬರೆದಿದ್ದಾರೆ. ‘ಓ ರೋಮಿಯೊ’ ಹಿಂದಿ ಚಿತ್ರದ ಟ್ರೈಲರ್‌ನಲ್ಲಿನ ಆಕರ್ಷಣೆಗಳಲ್ಲಿ ಈ ಸಂಭಾಷಣೆಯೂ ಒಂದೆನಿಸಿಕೊಂಡಿದೆ.

ಶಾಹಿದ್ ಕಪೂರ್ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ಅವರಿಗೆ ಜೋಡಿಯಾಗಿ ತೃಪ್ತಿ ಧುಮ್ರಿ ಇದ್ದಾರೆ. ನಾನಾ ಪಾಟೇಕರ್, ಅವಿನಾಶ್ ತಿವಾರಿ, ಫರೀದಾ ಜಲಾಲ್, ತಮನ್ನಾ ಭಾಟಿಯಾ ಕೂಡ ತಾರಾಬಳಗದಲ್ಲಿ ಇದ್ದಾರೆ.

ಎಸ್. ಹುಸೇನ್ ಜೈದಿ ಹಾಗೂ ಜೇನ್ ಬೋರ್ಗ್ಸ್ ಬರೆದಿರುವ ‘ಮಾಫಿಯಾ ಕ್ವೀನ್ಸ್ ಆಫ್ ಮುಂಬೈ’ ಪುಸ್ತಕದ ಪಾತ್ರಗಳನ್ನು ಉತ್ಪ್ರೇಕ್ಷಿತ ಮಟ್ಟಕ್ಕೆ ಕೊಂಡೊಯ್ದು ವಿಶಾಲ್ ಚಿತ್ರಕಥೆ ಬರೆದಿದ್ದಾರೆ ಎನ್ನಲಾಗುತ್ತಿದೆ. ಸಪ್ನಾ ದೀದಿ ಎಂದೇ ಹೆಸರಾಗಿದ್ದ ಭೂಗತ ಪಾತಕಿ ಮಹಿಳೆಯ ಪಾತ್ರ ಕೇಂದ್ರೀಕರಿಸಿದ ಸಿನಿಮಾ ಇದಾಗಿದ್ದು, ಸಹಜವಾಗಿಯೇ ಹಿಂಸಾ ದೃಶ್ಯಗಳಿಂದ ಇಡುಕಿರಿದಿದೆ. ವಿಶಾಲ್ ಗರಡಿಯಲ್ಲಿ ಶಾಹಿದ್ ಅಭಿನಯಿಸುತ್ತಿರುವ ನಾಲ್ಕನೆಯ ಚಿತ್ರವಿದು. ಸಾಜಿದ್ ನಾಡಿಯಾದ್ವಾಲಾ ನಿರ್ಮಾಣದ ಈ ಸಿನಿಮಾ ಮುಂದಿನ ತಿಂಗಳು ತೆರೆ ಕಾಣಲಿದೆ. ■


ಶಾಹಿದ್ ಕಪೂರ್


ವಿಶಾಲ್ ಭಾರದ್ವಾಜ್